# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 11/2020-21 ದಿನಾಂಕ: 06.03.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:- 06.03.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಹಾಗೂ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಆದೇಶದ ಮೇರೆಗೆ ಈ ಮಾಹೇಯ ಸಭೆಯಲ್ಲಿ 2021-22 ನೇ ಸಾಲಿನಲ್ಲಿ ಮಂಡಿಸುವ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯುವ ಸಲುವಾಗಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

<u>ಉಪಸ್ಥಿತರು:</u>

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 3 | ಶ್ರೀ.ಚಂದ್ರಶೇಖರ್.ಎ.ಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 4 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 5 | ಶ್ರೀ.ಹರೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | 8431325214 |
| 6 | ಶ್ರೀ.ತಿರುಮಲ ಪ್ರಸಾದ್ | BWSSB (PMC) | |
| 7 | ಶ್ರೀ. ಆನಂದ್ | AEE (BWSSB) | |
| 8 | ಶ್ರೀ.ಚಂದ್ರಶೇಖರ್, ವಿಜಯ ಬ್ಯಾಂಕ್ ಕಾಲೋನಿ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:- | - | - |
| 9 | ಶ್ರೀ.ಟೋನಿ ಸ್ವಾಮಿ, ಸಾಯಿ ಬಡಾವಣೆ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 10 | ಶ್ರೀಮತಿ.ಸುಭಾಷಿಣಿ ಫರ್ನ್ಸ್ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | - | - |
| 11 | ಶ್ರೀ.ಆನಂದ್, ಬಂಜಾರ ಬಡಾವಣೆ ನಿವಾಸಿ:- | - | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಮು.ತಿ.ನೋ

Scanned with CamScanner

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಆರ್ಮುಗಂ, ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ಸರ್.ಎಂ.ವಿ ನಗರ 1ನೇ ಹಂತ, 4ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, 19ನೇ ಅಡ್ಡರಸ್ತೆಗಳಲ್ಲಿ ಹಾಗೂ ಉಳಿದ ಅಡ್ಡರಸ್ತೆಗಳನ್ನು ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಲು ಹಿಂದಿನ ಸಭೆಯಲ್ಲಿಯೂ ಸಹ ಕೋರಿಕೊಂಡಿರುತ್ತಾರೆ. ಹಾಗೂ ಕಸ ವಿಲೇವಾರಿ ಮಾಡಬೇಕೆಂದು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25 ರವರು ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 2021-22ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಲು ಸಭೆಯಲ್ಲಿ ಸೂಚಿಸಿತು. ಈ ಬಗ್ಗೆ ರಸ್ತೆಯ ಕುರಿತು ಕ್ರಮವಹಿಸಲು ಹಾಗೂ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕಸ ವಿಲೇವಾರಿ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ಚಂದ್ರಶೇಖರ್, ವಿಜಯ ಬ್ಯಾಂಕ್ ಕಾಲೋನಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ 'ಈ' 1ನೇ ಅಡ್ಡರಸ್ತೆಯಲ್ಲಿ ಬೋರ್‌ವೆಲ್ ಸಂಪರ್ಕ ಒದಗಿಸಿದ್ದು, ಒಂದು ತಿಂಗಳಿನಿಂದ ನೀರು ಬರುತ್ತಿರುವುದಿಲ್ಲ ಬೋರ್‌ವೆಲ್ ಪೈಪ್ ಕನೆಕ್ಷನ್ ಮತ್ತು ಹೊಸದಾಗಿ ನೀರಿನ್ ವಾಲ್ವುಗಳನ್ನು ಅಳವಡಿಸಬೇಕೆಂದು ಕೋರಿರುತ್ತಾರೆ. ಹಾಗೂ ಅಸೋಸಿಯೇಷನ್ ಬಿಲ್ಡಿಂಗ್ ರಸ್ತೆಯಲ್ಲಿ ಬ್ಯಾಂಕರ್‌ನ್ನು ಒಡೆದುಹಾಕಿದ್ದು ರಸ್ತೆಯಲ್ಲಿ ಡೆಬ್ರಿಸ್ ಹಾಕಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು, ರಸ್ತೆ ಸಮತಟ್ಟು ಮಾಡಿಕೊಡಬೇಕೆಂದು ಕೋರಿರುತ್ತಾರೆ ಹಾಗೂ ಸಾರ್ವಜನಿಕರು ರಸ್ತೆ ಬದಿಗಳಲ್ಲಿ ಕಸ ವಿಲೇವಾರಿ ಮಾಡದೇ ಬೆಂಕಿ ಹಾಕುತ್ತಿರುವುದರ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿರುತ್ತಾರೆ.

ಸದರಿ ವಾರ್ಡ್‌ನಲ್ಲಿ ದಿನನಿತ್ಯ ಪೌರಕಾರ್ಮಿಕರು ಸ್ವಚ್ಛತಾ ಕೆಲಸ ಕಾರ್ಯಗಳಲ್ಲಿ ತೊಡಗಿದ್ದು, ಅವರಿಗೆ ಅಗತ್ಯ ಸಾಮಾಗ್ರಿ(ಗಮ್ ಬೂಟ್ಸ್, ಗ್ಲೌಸ್) ಗಳನ್ನು ಒದಗಿಸಲು ಸಲಹೆ ನೀಡಿರುತ್ತಾರೆ ಮತ್ತು ಈ ವಾರ್ಡಿನಲ್ಲಿ ಟ್ರಾಫಿಕ್ ನಿಯಂತ್ರಿಸಲು ಕ್ರಮಕೈಗೊಳ್ಳಲು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25, ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು, ಸಂಚಾರಿ ಪೋಲೀಸ್ ಕೆ.ಆರ್.ಪುರಂ ರವರಿಗೆ ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ಟೋನಿ ಸ್ವಾಮಿ, ಸಾಯಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ -** ರವರು ಮಾತನಾಡಿ ಸಾಯಿ ಬಡಾವಣೆ ಮುಖ್ಯರಸ್ತೆ, 3ನೇ ಅಡ್ಡರಸ್ತೆಯಲ್ಲಿ ಬೋರ್‌ವೆಲ್ ಪೈಪ್ ಲೈನ್ ಒಡೆದು ಹೋಗಿದ್ದು ರಸ್ತೆಗಳ ಮೇಲೆ ನೀರು ಹರಿಯುತ್ತಿರುವುದರಿಂದ ಸಾರ್ವಜನಿಕರಿಗೆ ವಾಹನ ಸಂಚಾರರಿಗೆ ತುಂಬಾ ತೊಂದರೆಯುಂಟಾಗುತ್ತಿರುತ್ತದೆ. ಸಾಯಿಬಾಬ ಬಡಾವಣೆಗೆ ಹೊಂದಿಕೊಂಡಂತಿರುವ ಅರ್ಕಾವತಿ ಬಡಾವಣೆಯಲ್ಲಿ ಬಿ.ಡಿ.ಎ ವತಿಯಿಂದ ಮಳೆನೀರು ಹರಿಯಲು ಮಳೆನೀರು ಚರಂಡಿಯನ್ನು ಇದುವರೆವಿಗೂ ರೀಗ್ರೇಡ್ ಮಾಡದಿರುವ ಕುರಿತು ಮತ್ತು ರಾಜಕಾಲುವೆ ಗೋಡೆಯನ್ನು ನಿರ್ಮಿಸದಿರುವ ಬಗ್ಗೆ ಈಗಾಗಲೇ ಹಿಂದಿನ ಸಭೆಯಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಿ.ಎ ರವರು ಸಭೆಗೆ ಹಾಜರಾಗಿರುವುದಿಲ್ಲವಾದ್ದರಿಂದ ಸದರಿ ರವರು ಕ್ರಮವಹಿಸಲು ಪತ್ರ ಬರೆಯಲು ಹಾಗೂ ರಾಜಕಾಲುವೆ ತಡೆಗೋಡೆ ನಿರ್ಮಾಣದ ಬಗ್ಗೆ ಸ.ಕಾ.ಅ ಬೃಹತ್ ನೀರುಗಾಲುವೆ ವಿಭಾಗ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀಮತಿ.ಸುಭಾಷಿಣಿ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ -** ರವರು ಮಾತನಾಡಿ ಸದರಿ ಗೋಲ್ಡನ್ ಫಾರ್ಮ್ ರಸ್ತೆ ಕೂಡಲೇ ಡಾಂಬರೀಕರಣ ಮಾಡಲು ಮತ್ತು ಕೆ.ನಾರಾಯಣಪುರ ಕ್ರಿಸ್ತು ಜಯಂತಿ ಕಾಲೇಜು ರಸ್ತೆಯು ತುಂಬಾ ಹಾಳಾಗಿದ್ದು, ವಾಹನಗಳ ಸಂಚಾರ ಹೆಚ್ಚಾಗಿದ್ದು, ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ರಸ್ತೆ ದುರಸ್ಥಿ ಮಾಡಲು ಹಾಗೂ ಗೋಲ್ಡನ್ ಪಾರ್ಮ್ ರಸ್ತೆ ಅಭಿವೃದ್ಧಿ ಪಡಿಸಲು ಕೋರಿರುತ್ತಾರೆ. ಇದುವರೆವಿಗೂ ಡಾಂಬರೀಕರಣ ಆಗಿರುವುದಿಲ್ಲ. ಈ ರಸ್ತೆಯಲ್ಲಿ ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು, ಅಪಘಾತಗಳು ಸಹ ಸಂಭವಿಸುತ್ತಿದ್ದು, ಹಿಂದಿನ ನಾಲ್ಕು ಸಭೆಗಳಲ್ಲಿ ಡಾಂಬರೀಕರಣ ಮಾಡುವ ಬಗ್ಗೆ ಕೋರಲಾಗಿದ್ದರೂ ಸಹ ಇದುವರೆವಿಗೂ ಡಾಂಬರೀಕರಣ ಮಾಡಲು ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮವಹಿಸದಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ನಿಗಧಿತ ಅವಧಿಯನ್ನು ತಿಳಿಸಲು ಕೋರಿಕೊಂಡಿರುತ್ತಾರೆ. ಮತ್ತು ಗೋಲ್ಡನ್ ಪಾರ್ಮ್ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕೊಳವೆಸಾಲು ಅಳವಡಿಸಲಾಗಿದ್ದು, ಅದರ ಅನುಪಯುಕ್ತ ಮಣ್ಣನ್ನು ತೆಗೆದು ಸದರಿ ರಸ್ತೆಯು ಬಿ.ಡಿ.ಎ ವ್ಯಾಪ್ತಿಗೆ ಬರುತ್ತಿದ್ದು, ಬಿ.ಡಿ.ಎ ವತಿಯಿಂದ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ. ಈ ಕುರಿತು ಬಿ.ಬಿ.ಎಂ.ಪಿ/ಬಿ.ಡಬ್ಲ್ಯೂ.ಎಸ್.ಎಸ್.ಬಿ/ಬಿ.ಡಿ.ಎ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಅಸಮಧಾನ ವ್ಯಕ್ತಪಡಿಸಿ, ತುರ್ತಾಗಿ ಕ್ರಮ ಕೈಗೊಳ್ಳಲು ಹಾಗೂ ಮುಂದಿನ ಸಭೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿ.ಡಿ.ಎ, ಬೆಸ್ಕಾಂ, ರಸ್ತೆ ಮೂಲಭೂತ ಸೌಕರ್ಯ, ಆರಕ್ಷಕ ನಿರೀಕ್ಷಕರು ಸಂಚಾರಿ ವಿಭಾಗ, ಮತ್ತು ಆರಕ್ಷಕ ನಿರೀಕ್ಷಕರು ರವರಗೆ ಸಭೆಗೆ ಹಾಜರಾಗಲು ಸೂಚಿಸಿರುತ್ತಾರೆ.

**ಕ್ರಮ:-** ನೋಡಲ್ ಅಧಿಕಾರಿರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಿ.ಎ ರವರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದ್ದು, ಸಭೆಗೆ ಹಾಜರಾಗಿರುವುದಿಲ್ಲವಾದ್ದರಿಂದ ಸದರಿ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ಹಾಗೂ ಬೆಸ್ಕಾಂ, ರಸ್ತೆ ಮೂಲಭೂತ ಸೌಕರ್ಯ, ಆರಕ್ಷಕ ನಿರೀಕ್ಷಕರು ಸಂಚಾರಿ ವಿಭಾಗ, ಮತ್ತು ಆರಕ್ಷಕ ನಿರೀಕ್ಷಕರು ರವರುಗಳೆಲ್ಲಾ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ನೋಟೀಸ್ ಜಾರಿಮಾಡಲು ಸೂಚಿಸಿರುತ್ತಾರೆ. ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

ಶ್ರೀ.ಆನಂದ್, ಬಂಜಾರ ಬಡಾವಣೆ ನಿವಾಸಿ:- ರವರು ಮಾತನಾಡಿ ಕನಕಗಿರಿ ಶೂಟಿಂಗ್ ಬಿಲ್ಡಿಂಗ್ ಬಳಿ ಅಡ್ಡರಸ್ತೆಗಳು ಬಂಜಾರ ಬಡಾವಣೆ ಆರ್ಚ್ ಮುಖ್ಯರಸ್ತೆಯಲ್ಲಿ ಈಗಾಗಲೇ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕೊಳವೆ ಸಾಲುಗಳನ್ನು ಅಳವಡಿಸಿದ್ದು, ಸದರಿ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಮಾಡಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರು. ಹಾಗೂ ಸಹಾಯಕ ಅಭಿಯಂತರರು. ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

**ಹೊರಮಾವು ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ರಸ್ತೆಗಳ ವಿಭಾಗ, ಸಹಾಯಕ ಅಭಿಯಂತರರು ಬೆಸ್ಕಾಂ- ದೂರವಾಣಿನಗರ, ಬಾಣಸವಾಡಿ, ನಾಗವಾರ, ಆರಕ್ಷಕ ಸಿಬ್ಬಂಧಿಗಳು- ರಾಮಮೂರ್ತಿನಗರ, ಹೆಣ್ಣೂರು ಪೋಲೀಸ್‌ಠಾಣೆ, ಆರಕ್ಷಕ ಸಿಬ್ಬಂಧಿಗಳು ಸಂಚಾರ ವಿಭಾಗ-ಕೆ.ಆರ್.ಪುರ, ರಾಮಮೂರ್ತಿನಗರ, ಬಾಣಸವಾಡಿ ಹಾಗೂ ಸಹಾಯಕ ಅಭಿಯಂತರರು ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು,** ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. Sal

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner